# ಸಭಾಪತಿ ಹೊರಟ್ಟಿಯವರಿಗೆ ಗುರುವಂದನೆ



ಗದಗ, ೨೧ : ಕಳೆದ ನಾಲ್ಕು ದಶಕಗಳಿಂದ ನಾಡಿನ ಶಿಕ್ಷಕ ಬಂಧುಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿರುವ ಸಭಾಪತಿ ಬಸವರಾಜ ಹೊರಟ್ಟಿಯವರು ಶಿಕ್ಷಕರ ಜೀವಧ್ವನಿಯಾಗಿದ್ದಾರೆಂದು ತುರುವೆಕೆರೆಯ ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ಕರ್ನಾಟಕ ರಾಜ್ಯ ಬೋರ್ಡ ಆಫ್ ಹೆಡ್‌ಮಾಸ್ಟರ್ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಎನ್. ಚಂದ್ರೇಗೌಡ ಹೇಳಿದರು.

ತಮ್ಮ ಕುಟುಂಬದ ಪರಿವಾರದ ಪರವಾಗಿ ಕಳೆದ ನಾಲ್ಕು ದಶಕಗಳಿಂದ ಬಸವರಾಜ ಹೊರಟ್ಟಿಯವರು ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ ಸ್ಮರಣೆಗಾಗಿ ಗುರುವಂದನೆ ಕಾರ್ಯಕ್ರಮ ಏರ್ಪಡಿಸಿ ಮಾತನಾಡಿದ ಅವರು, ೧೯೮೦ ರಿಂದ ಸತತ ಏಳು ಬಾರಿ ಆಯ್ಕೆಯಾಗುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. ೧೯೭೭ರಿಂದ ಶಿಕ್ಷಕರ ಪರವಾಗಿ ಹೋರಾಡುತ್ತಾ ಬಂದಿರುವ ಅವರು ಶಿಕ್ಷಕ ಬಂಧುಗಳ ನಾಡಿನ ಏಕೈಕ ನಿಜಧ್ವನಿಯಾಗಿದ್ದಾರೆ. ಹೋರಾಟವನ್ನೇ ಜೀವಧ್ವನಿಯಾಗಿಸಿಕೊಂಡಿರುವ ಹೊರಟ್ಟಿಯವರು ಶಿಕ್ಷಕ ಬಂಧುಗಳ ಆಪದ್ಬಾಂದವರು. ನಾಡಿನ ಸಮಸ್ತ ಶಿಕ್ಷಕರ ಎಲ್ಲ ಸಮಸ್ಯೆಗಳಿಗೂ ಸ್ಪಂದಿಸುತ್ತಾ ಬಂದಿರುವ ಬಸವರಾಜ ಹೊರಟ್ಟಿಯಂತಹ ಅಪರೂಪದ ನಾಯಕರು ಸಿಕ್ಕಿದ್ದು ಶಿಕ್ಷಕ ಬಂಧುಗಳು ಭಾಗ್ಯವೆಂದೇ ಭಾವಿಸಿದ್ದೇನೆ ಎಂದು ಹೇಳಿದರು. ಇಂತಹ ಕಾರ್ಯಕ್ರಮಕ್ಕೆ ಅವಕಾಶ ಮಾಡಿ ಕೊಟ್ಟ ಬಸವರಾಜ ಹೊರಟ್ಟಿಯವರ ಸ್ನೇಹಿತರಿಗೆ ಚಿರಋಣಿಯಾಗಿದ್ದೇನೆ.

ಗುರುವಂದನೆ ಸ್ವೀಕರಿಸಿ ಮಾತನಾಡಿದ ಸಭಾಪತಿ ಬಸವರಾಜ ಹೊರಟ್ಟಿಯವರು, ಎಂ.ಎನ್. ಚಂದ್ರೇಗೌಡ ನನ್ನ ಕಳೆದ ನಾಲ್ಕು ದಶಕಗಳ ಸ್ನೇಹಿತ, ಅವರ ಕುಟುಂಬದವರೆಲ್ಲರೂ ಸೇರಿ ನನಗೆ ಗುರುವಂದನೆ ಸಲ್ಲಿಸಿದ್ದು ಸದಾಕಾಲ ನೆನಪುಳಿಯಂಥದ್ದು, ಇಂಥವರ ಸ್ನೇಹ ಸಂಬಂಧ ಹಾಗೂ ನಾಡಿನ ಶಿಕ್ಷಕರು ನನ್ನ ಮೇಲೆ ಇಟ್ಟ ನಂಬುಗೆ, ವಿಶ್ವಾಸ, ಪ್ರೀತಿ ನನ್ನನ್ನು ಕಳೆದ ಐದು ದಶಕಗಳಿಂದ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಲು ಪ್ರೇರಣೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಶ್ರೀಮತಿ ಪುಷ್ಪಲತಾ ಚಂದ್ರೇಗೌಡ, ಚೇತನಗೌಡ, ಕೆ.ಎ.ಹಿರೇಮಠ, ಉಮೇಶ ಹಿರೇಮಠ, ಎಸ್.ಎಂ.ಅಗಡಿ ಸೇರಿದಂತೆ ಎಂ.ಎನ್.ಚಂದ್ರೇಗೌಡ ಪರಿವಾರದವರು ಉಪಸ್ಥಿತರಿದ್ದರು.

# ಸಭಾಪತಿ ಬಸವರಾಜ ಹೊರಟ್ಟಿಗೆ ಗುರುವಂದನೆ



ಗದಗ, ಆ. 21. ಕಳೆದ ನಾಲ್ಕು ದಶಕಗಳಿಂದ ನಾಡಿನ ಶಿಕ್ಷಕ ಬಂಧುಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿರುವ ಸಭಾಪತಿ ಬಸವರಾಜ ಹೊರಟ್ಟಿಯವರು ಶಿಕ್ಷಕರ ಜೀವ ಧ್ವನಿಯಾಗಿದ್ದಾರೆಂದು ತುರುವೆಕೆರೆಯ ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ಕರ್ನಾಟಕ ರಾಜ್ಯ ಬೋರ್ಡ್ಆಫ್ ಹೆಡ್ ಮಾಸ್ಟರ್ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಎನ್.ಚಂದ್ರೇಗೌಡ ಹೇಳಿದರು.

ಕಳೆದ ನಾಲ್ಕು ದಶಕಗಳಿಂದ ಬಸವರಾಜ ಹೊರಟ್ಟಿಯವರು ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ ಸ್ಮರಣೆಗಾಗಿ ಅವರು ತಮ್ಮ ಕುಟುಂಬದ ಪರಿವಾರದ ಪರವಾಗಿ ಗುರುವಂದನೆ ಕಾರ್ಯಕ್ರಮ ಏರ್ಪಡಿಸಿ ಮಾತನಾಡಿದರು

ಬಸವರಾಜ ಹೊರಟ್ಟಿಯಂತಹ ಅಪರೂಪದ ನಾಯಕರು ಸಿಕ್ಕಿದ್ದು ಶಿಕ್ಷಕ ಬಂಧುಗಳು ಭಾಗ್ಯವೆಂದೇ ಭಾವಿಸಿದ್ದೇನೆ ಎಂದರು.

ಗುರುವಂದನೆ ಸ್ವೀಕರಿಸಿ ಮಾತನಾಡಿದ ಸಭಾಪತಿ ಬಸವರಾಜ ಹೊರಟ್ಟಿ, ಎಂ.ಎನ್.ಚಂದ್ರೇಗೌಡ ನನ್ನ ನಾಲ್ಕು ದಶಕಗಳ ಸ್ನೇಹಿತ ಅವರ ಕುಟುಂಬದವರೆಲ್ಲರೂ ಸೇರಿ ನನಗೆ ಗುರುವಂದನೆ ಸಲ್ಲಿಸಿದ್ದು ಸದಾಕಾಲ ನೆನಪುಳಿಯಂಥದ್ದು ಇಂತಹವರ ಸ್ನೇಹ ಸಂಬಂಧ ಹಾಗೂ ನಾಡಿನ ಶಿಕ್ಷಕರು ನನ್ನ ಮೇಲೆ ಇಟ್ಟ ನಂಬಿಕೆ, ವಿಶ್ವಾಸ, ಪ್ರೀತಿ ನನ್ನನ್ನು ಕಳೆದ ಐದು ದಶಕಗಳಿಂದ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಲು ಪ್ರೇರಣೆಯಾಗಿದೆ ಎಂದು ಹೇಳಿದರು.

ಡಾ.ಬಸವರಾಜ ಧಾರವಾಡ, ಶ್ರೀಮತಿ ಪುಷ್ಪಲತಾಚಂದ್ರೇಗೌಡ, ಚೇತನಗೌಡ, ಕೆ.ಎ.ಹಿರೇಮಠ, ಉಮೇಶ ಹಿರೇಮಠ, ಎಸ್.ಎಂ.ಅಗಡಿ ಸೇರಿದಂತೆ, ಎಂ.ಎನ್.ಚಂದ್ರೇಗೌಡ ಕುಟುಂಬದ ಪರಿವಾರದವರು ಉಪಸ್ಥಿತರಿದ್ದರು.

# ಎಂ.ಎನ್.ಚಂದ್ರೇಗೌಡ ಪರಿವಾರದಿಂದ ಬಸವರಾಜ ಹೊರಟ್ಟಿಯವರಿಗೆ ಗುರುವಂದನೆ

**ಗದಗ ಸಂಜೆ ಸುದ್ದಿ**

ಗದಗ : ಕಳೆದ ನಾಲ್ಕು ದಶಕಗಳಿಂದ ನಾಡಿನ ಶಿಕ್ಷಕ ಬಂಧುಗಳ ಸಮಸ್ಯೆಗಳಿಗೆ ಸ್ಪಂದಿಸುತ್ತಾ ಬಂದಿರುವ ಸಭಾಪತಿ ಬಸವರಾಜ ಹೊರಟ್ಟಿಯವರು ಶಿಕ್ಷಕರ ಜೀವಧ್ವನಿಯಾಗಿದ್ದಾರೆಂದು ತುರುವೇಕೆರೆಯ ನಿವೃತ್ತ ಮುಖ್ಯೋಪಾಧ್ಯಾಯ ಹಾಗೂ ಕರ್ನಾಟಕ ರಾಜ್ಯ ಬೋರ್ಡ್‌ಆಫ್ ಹೆಡ್‌ಮಾಸ್ಟರ್ ಸಂಘದ ಪ್ರಧಾನ ಕಾರ್ಯದರ್ಶಿ ಎಂ.ಎನ್.ಚಂದ್ರೇಗೌಡ ಹೇಳಿದರು.



ಅವರು ತಮ್ಮ ಕುಟುಂಬದ ಪರಿವಾರದ ಪರವಾಗಿ ಕಳೆದ ನಾಲ್ಕು ದಶಕಗಳಿಂದ ಬಸವರಾಜ ಹೊರಟ್ಟಿಯವರು ವಿಧಾನಪರಿಷತ್ ಸದಸ್ಯರಾಗಿ ಸೇವೆ ಸಲ್ಲಿಸಿದ ಸ್ಮರಣೆಗಾಗಿ ಗುರುವಂದನೆ ಕಾರ್ಯಕ್ರಮ ಏರ್ಪಡಿಸಿ ಮಾತನಾಡಿದ ಅವರು 1980 ರಿಂದಸತತ ಏಳುಬಾರಿ ಆಯ್ಕೆಯಾಗುವ ಮೂಲಕ ಐತಿಹಾಸಿಕ ದಾಖಲೆ ನಿರ್ಮಿಸಿದ್ದಾರೆ. 1976ರಿಂದ ಶಿಕ್ಷಕರ ಪರವಾಗಿ ಹೋರಾಡುತ್ತಾ ಬಂದಿರುವ ಅವರು ಶಿಕ್ಷಕ ಬಂಧುಗಳ ನಾಡಿನ ಏಕೈಕ ನಿಜಧ್ವನಿಯಾಗಿದ್ದಾರೆ. ಹೋರಾಟವನ್ನೇ ಜೀವಧ್ವನಿ ಯಾಗಿಸಿ ಕೊಂಡಿರುವ ಹೊರಟ್ಟಿಯವರು ಶಿಕ್ಷಕ ಬಂಧುಗಳ ಆಪದ್ಬಾಂಧವರು. ನಾಡಿನ ಸಮಸ್ತ ಶಿಕ್ಷಕರ ಎಲ್ಲ ಸಮಸ್ಯೆಗಳಿಗೂ ಸ್ಪಂದಿಸುತ್ತಾ ಬಂದಿರುವ ಬಸವರಾಜ ಹೊರಟ್ಟಿಯಂತಹ ಅಪರೂಪದ ನಾಯಕರು ಸಿಕ್ಕಿದ್ದು ಶಿಕ್ಷಕ ಬಂಧುಗಳು ಭಾಗ್ಯವೆಂದೇ ಭಾವಿಸಿದ್ದೇನೆ ಎಂದು ಹೇಳಿದರು. ಇಂತಹ ಕಾರ್ಯಕ್ರಮಕ್ಕೆ ಅವಕಾಶ ಮಾಡಿಕೊಟ್ಟ ಬಸವರಾಜ ಹೊರಟ್ಟಿಯವರ ಸ್ನೇಹಿತರಿಗೆ ಚಿರಋಣಿ ಯಾಗಿದ್ದೇನೆ.

ಗುರುವಂದನೆ ಸ್ವೀಕರಿಸಿ ಮಾತನಾಡಿದ ಸಭಾಪತಿ ಬಸವರಾಜ ಹೊರಟ್ಟಿಯವರು ಎಂ.ಎನ್.ಚಂದ್ರೇಗೌಡ ನನ್ನ ಕಳೆದ ನಾಲ್ಕು ದಶಕಗಳ ಸ್ನೇಹಿತ ಅವರ ಕುಟುಂಬದವರೆಲ್ಲರೂ ಸೇರಿ ನನಗೆ ಗುರುವಂದನೆ ಸಲ್ಲಿಸಿದ್ದು ಸದಾಕಾಲ ನೆನಪುಳಿಯುಂಥದ್ದು ಇಂತಹವರ ಸ್ನೇಹ ಸಂಬಂಧ ಹಾಗೂ ನಾಡಿನ ಶಿಕ್ಷಕರು ನನ್ನ ಮೇಲೆ ಇಟ್ಟ ನಂಬುಗೆ, ವಿಶ್ವಾಸ, ಪ್ರೀತಿ ನನ್ನನ್ನು ಕಳೆದ ಐದು ದಶಕಗಳಿಂದ ಶಿಕ್ಷಕರ ಧ್ವನಿಯಾಗಿ ಕೆಲಸ ಮಾಡಲು ಪ್ರೇರಣೆಯಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಡಾ.ಬಸವರಾಜ ಧಾರವಾಡ, ಶ್ರೀಮತಿ ಪುಷ್ಪಲತಾ ಚಂದ್ರೇಗೌಡ, ಚೇತನಗೌಡ, ಕೆ.ಎ.ಹಿರೇಮಠ, ಉಮೇಶ ಹಿರೇಮಠ, ಎಸ್.ಎಂ.ಅಗಡಿ ಸೇರಿದಂತೆ, ಎಂ.ಎನ್. ಚಂದ್ರೇಗೌಡ ಕುಟುಂಬದ ಪರಿವಾರದವರು ಉಪಸ್ಥಿತರಿದ್ದರು.